494

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1091 |
| 2. | ಪ್ರಶ್ನೆ ಕೇಳಿದ ಸದಸ್ಯರು | ಶ್ರೀ. ಮಂಜುನಾಥ್ ಭಂಡಾರಿ |
| 3. | ಉತ್ತರಿಸುವ ದಿನಾಂಕ | 22.02.2024 |
| 4. | ಉತ್ತರಿಸುವ ಸಚಿವರು | ಮುಖ್ಯಮಂತ್ರಿಯವರು |

| | **ಪ್ರಶ್ನೆ** | **ಉತ್ತರ** |
|---|---|---|
| (ಅ) | ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಕಾರ್ಯಕ್ರಮಗಳಿಗೆ ಸರ್ಕಾರದ ಶಿಷ್ಟಾಚಾರ ನಿಯಮಗಳೇನು;<br><br>ಸರ್ಕಾರ ಯಾವ ಯಾವ ಇಲಾಖೆಗಳಿಗೆ ಶಿಷ್ಟಾಚಾರ ನಿಯಮಗಳು ಅನ್ವಯಿಸುತ್ತವೆ ಹಾಗೂ ಅನ್ವಯಿಸುವುದಿಲ್ಲ;<br><br>ಶಿಷ್ಟಾಚಾರ ನಿಯಮಗಳು ಆಯಾಯ ಸರ್ಕಾರ ಕಾರ್ಯ ಕ್ರಮಗಳಿಗೆ ಅನ್ವಯಿಸಲು ಅಥವಾ ಅನ್ವಯಿಸದಿರಲು ಇರುವ ಮಾನದಂಡಗಳೇನು; (ಇಲಾಖಾವಾರು ನಿಯಮಗಳ ವಿವರ ನೀಡುವುದು) | ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಕುರಿತು **ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018(1), ದಿನಾಂಕ:16.04.2019 ರಲ್ಲಿ ಸಮಗ್ರ ಸೂಚನೆಗಳನ್ನು ನೀಡಲಾಗಿರುತ್ತದೆ.** (ಪ್ರತಿ ಲಗತ್ತಿಸಿದೆ.)<br><br>ಶಿಷ್ಟಾಚಾರಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಸುತ್ತೋಲೆಯಲ್ಲಿ ನೀಡಲಾಗಿರುವ ಮಾರ್ಗಸೂಚಿಗಳು ಸಮಗ್ರವಾಗಿದ್ದು,ಎಲ್ಲ ಇಲಾಖೆಗಳಿಗೆ ಅನ್ವಯಿಸುತ್ತವೆ |
| (ಆ) | ಆಯಾಯ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಜನವಸತಿ ಪ್ರದೇಶ, ವಾರ್ಡ್, ಆಯಾಯ ಚುನಾವಣಾ ಕ್ಷೇತ್ರಗಳ, ಗ್ರಾಮ, ಹೋಬಳಿ, ತಾಲ್ಲೂಕು, ಉಪ ವಿಭಾಗ, ಜಿಲ್ಲೆ, ವಲಯ ಹಾಗೂ ರಾಜ್ಯ ಮಟ್ಟದ ಸರ್ಕಾರಿ ಕಾರ್ಯಕ್ರಮಗಳಿಗೆ ಪ್ರತ್ಯೇಕ ಶಿಷ್ಟಾಚಾರ ನಿಯಮಗಳಿವೆಯೇ; ಆಯಾ ಮಟ್ಟದ ಸರ್ಕಾರಿ ಕಾರ್ಯಕ್ರಮಗಳಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ನಿಯಮಗಳ ವಿವರ ನೀಡುವುದು; | ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018(1), ದಿನಾಂಕ:16.04.2019 **ರಲ್ಲಿ ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಕುರಿತು ಸಮಗ್ರ ಸೂಚನೆಗಳನ್ನು ನೀಡಲಾಗಿರುತ್ತದೆ.**ಸದರಿ ಸುತ್ತೋಲೆಯು ಎಲ್ಲ ಮಟ್ಟದ **ಸರ್ಕಾರಿ ಕಾರ್ಯಕ್ರಮಗಳಿಗೆ ಅನ್ವಯವಾಗುತ್ತವೆ.** |
| (ಇ) | ರಾಜ್ಯ ಆಯಾಯ ಮಟ್ಟದ ಸರ್ಕಾರಿ ಕಾರ್ಯಕ್ರಮಗಳಿಗೆ ಆಹ್ವಾನ ಪತ್ರಿಕೆ ಮುದ್ರಿಸುವಾಗ, ಜನಪ್ರತಿನಿಧಿಗಳ, ಅಧಿಕಾರಿಗಳ ಹುದ್ದೆ ಮತ್ತು ಹೆಸರುಗಳ ಅನುಕ್ರಮಣಿಕೆ ಹಾಗೂ | **ಪ್ರಸ್ತಾಪಿತ ಸುತ್ತೋಲೆಯಲ್ಲಿ ಆಹ್ವಾನ ಪತ್ರಿಕೆ ಮುದ್ರಿಸುವ ಕುರಿತು ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿರುತ್ತದೆ.**<br>• ಸಮಾರಂಭದಲ್ಲಿ ಪಾಲ್ಗೊಳ್ಳುವಂತಹ ಸಂದರ್ಭ, ರಾಜ್ಯ ಆಧ್ಯತಾ ಸೂಚಿ ಪಟ್ಟಿ ಮತ್ತು ಇತರೆ ಸನ್ನಿವೇಶಗಳನ್ನು ಆಧರಿಸಿ ಕೇಂದ್ರ ಸಚಿವರುಗಳು, ರಾಜ್ಯ ಸಂಪುಟ ದರ್ಜೆ ಸಚಿವರುಗಳು, ರಾಜ್ಯ ಸಚಿವರು, ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳಿಗೆ, ಘನ ಉಪಸ್ಥಿತಿ, ಉದ್ಘಾಟನೆ / ಶಂಕುಸ್ಥಾಪನೆ / ಲೋಕಾರ್ಪಣೆ, ಅಧ್ಯಕ್ಷರು, ಮುಖ್ಯ ಅತಿಥಿಗಳು, ವಿಶೇಷ ಆಹ್ವಾನಿತರು ಹೀಗೆ ಸ್ಥಾನಗಳನ್ನು ನೀಡಬೇಕು. ಇದೇ ಅನುಕ್ರಮದಲ್ಲಿ ಆಹ್ವಾನ ಪತ್ರಿಕೆಯನ್ನು ಮುದ್ರಿಸತಕ್ಕದ್ದು.<br>• **ಸರ್ಕಾರದ ಕಾರ್ಯಕ್ರಮದ ಎಲ್ಲಾ ಆಹ್ವಾನ ಪತ್ರಿಕೆಗಳಲ್ಲಿ ಆಹ್ವಾನಿತರ ಹೆಸರುಗಳನ್ನು ರಾಜ್ಯ ಆಧ್ಯಾತಾ ಸೂಚಿಪಟ್ಟಿಗೆ ಅನುಗುಣವಾಗಿಯೇ ಮುದ್ರಿಸಬೇಕು. ಈ ಆದ್ಯತಾಸೂಚಿ ಪಟ್ಟಿಯನ್ನು ಪರಿಗಣಿಸುವಾಗ ಜನಪ್ರತಿನಿಧಿಗಳು ಹೊಂದಿರುವ ಸ್ಥಾನಮಾನವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಆದರೆ, ರಾಜ್ಯ ಆದ್ಯತಾ ಸೂಚಿ ಪಟ್ಟಿಯ ಟಿಪ್ಪಣಿ 6(ಎ) ರಲ್ಲಿ ತಿಳಿಸಿರುವಂತೆ ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಆಹ್ವಾನ ಪತ್ರಿಕೆಯಲ್ಲಿ ಘನ ಉಪಸ್ಥಿತಿ, ಉಧ್ಘಾಟನೆ/ಶಂಕುಸ್ಥಾಪನೆ/ಲೋಕಾರ್ಪಣೆಯ ನಂತರ ನಮೂದಿಸುವುದು.** |

<table>
<tr>
<td></td>
<td>ವೇದಿಕೆಯಲ್ಲಿ ಆಸನ ಹಂಚಿಕೆಗಳ ಶಿಷ್ಟಾಚಾರ ನಿಯಮಗಳೇನು; (ವಿವರ ನೀಡುವುದು)</td>
<td>ಆಸನ ವ್ಯವಸ್ಥೆ ಕುರಿತು ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿರುತ್ತದೆ.<br>• ಆಸನ ವ್ಯವಸ್ಥೆ ಮಾಡುವಾಗಲೂ ರಾಜ್ಯ ಆಧ್ಯತಾ ಪಟ್ಟಿಯ ಪ್ರಕಾರವೇ ಗಣ್ಯರಿಗೆ ಸಲ್ಲಬೇಕಾದ ಸ್ಥಾನಮಾನಗಳನ್ನು ಆಯಾ ವರಿಷ್ಠರಿಗೆ ತಪ್ಪದೇ ಸಲ್ಲಿಸಬೇಕು. ಆದ್ದರಿಂದ, ಆಹ್ವಾನ ಪತ್ರಿಕೆಯನ್ನು ಆದ್ಯತಾಪಟ್ಟಿಯ ಮೇರೆಗೆ ಮುದ್ರಿಸುವುದರಿಂದ ಆಸನ ವ್ಯವಸ್ಥೆಯನ್ನು ಆಹ್ವಾನ ಪತ್ರಿಕೆಯ ಅನುಗುಣವಾಗಿ ಮಾಡುವುದು.<br><br>ಸಾಮಾನ್ಯವಾಗಿ ಶಿಷ್ಟಾಚಾರದಂತೆ ಅನುಸರಿಸಬೇಕಾದ ಆಸನ ವ್ಯವಸ್ಥೆಯನ್ನು ಕೆಳಕಂಡಂತೆ ನೀಡಲಾಗಿದೆ.
<table><tr><td>10</td><td>8</td><td>6</td><td>4</td><td>2</td><td>1</td><td>3</td><td>5</td><td>7</td><td>9</td><td>11</td></tr></table>
• ಮೇಲ್ಕಂಡಂತೆ ಕಾರ್ಯಕ್ರಮದ ಆಹ್ವಾನ ಪತ್ರಿಕೆಯ ಪ್ರಕಾರ ಮೊದಲಿಗರೋ ಯಾರೋ ಅವರನ್ನು ಮಧ್ಯದಲ್ಲಿ (ಆಸನ ಸಂಖ್ಯೆ:1) ಕೂರಿಸಬೇಕು ಅವರ ನಂತರ ಆಹ್ವಾನ ಪತ್ರಿಕೆಯ ಅನುಗುಣವಾಗಿ ಉಳಿದ ಗಣ್ಯರನ್ನು ಬಲ ಮತ್ತು ಎಡ ಭಾಗದಲ್ಲಿ ಮೇಲ್ಕಂಡಂತೆ ಆಸನ ವ್ಯವಸ್ಥೆಯನ್ನು ಮಾಡಬೇಕು.</td>
</tr>
<tr>
<td>(ಈ)</td>
<td>ರಾಜ್ಯದಲ್ಲಿ ವಿವಿಧ ಹಂತದ ಸರ್ಕಾರಿ ಕಾರ್ಯಕ್ರಮಗಳಿಗೆ ಶಿಷ್ಟಾಚಾರ ಪಾಲನೆಯ ಜವಾಬ್ದಾರಿಯಿರುವ ಖಾತರಿಪಡಿಸುವ ನಿಯಮಗಳೇನು; ಸರ್ಕಾರಿ ಕಾರ್ಯಕ್ರಮಗಳಿಗೆ ಆಹ್ವಾನ ಪತ್ರಿಕೆ ಮುದ್ರಿಸುವಾಗ, ಜನಪ್ರತಿನಿಧಿಗಳ, ಅದಿಕಾರಿಗಳ ಹುದ್ದೆ ಮತ್ತು ಹೆಸರುಗಳ ಅನುಕ್ರಮಣಿಕೆಯನ್ನು ಬರವಣಿಗೆಯ ಮೂಲಕ ಅನುಮೋದಿಸಲಾಗುತ್ತಿದೆಯೇ; (ವಿವರ ನೀಡುವುದು)</td>
<td>ಸದರಿ ಸುತ್ತೋಲೆಯಲ್ಲಿನ ಅಂಶಗಳನ್ವಯ ಆಹ್ವಾನ ಪತ್ರಿಕೆ ಮುದ್ರಿಸಲು ಕ್ರಮವಹಿಸಲಾಗುತ್ತಿದೆ.</td>
</tr>
<tr>
<td>(ಉ)</td>
<td>ಆಹ್ವಾನ ಪತ್ರಿಕೆ ಮುದ್ರಿಸದೆ ಮಾಡುವ ಶಂಕುಸ್ಥಾಪನೆ, ಚಾಲನೆ, ಉದ್ಘಾಟನೆ ಇತ್ಯಾದಿ ಕಾರ್ಯಕ್ರಮಗಳಿಗೆ ಶಿಷ್ಟಾಚಾರ ನಿಯಮಗಳಿವೆಯೇ; ಇದ್ದಲ್ಲಿ ಯಾವುವು (ವಿವರ ನೀಡುವುದು)</td>
<td>ಅನ್ವಯಿಸುವುದಿಲ್ಲ</td>
</tr>
<tr>
<td>(ಊ)</td>
<td>ಶಿಷ್ಟಾಚಾರ ನಿಯಮಗಳ ಉಲ್ಲಂಘನೆಯಾದರೆ ಜವಾಬ್ದಾರಿ ಯಾರು; ಕಾರ್ಯಕ್ರಮ ಆಯೋಜಿಸಿದ ಹಾಗೂ ಆಹ್ವಾನಪತ್ರಿಕೆ ಮುದ್ರಿಸಿದ ಸಂಸ್ಥೆಯ ಮುಖ್ಯಸ್ಥರ ಮೇಲೆಯೇ ಅಥವಾ ಶಿಷ್ಟಾಚಾರ ಪಾಲನೆ ಹಾಗೂ ಆಹ್ವಾನ ಪತ್ರಿಕೆಯನ್ನು ಅನುಮೋದಿಸಿದ ಅದಿಕಾರಿಯ ಮೇಲೆಯೇ? (ವಿವರ ನೀಡುವುದು)</td>
<td>ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ಹಂತದಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಶಿಷ್ಟಾಚಾರದ ಬಗ್ಗೆ ಪೂರ್ಣವಾಗಿ ತರಬೇತಿ ನೀಡುವುದು. ಶಿಷ್ಟಾಚಾರ ಲೋಪವಾದ ಪ್ರಕರಣಗಳಲ್ಲಿ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ಸಂಬಂಧಪಟ್ಟವರಿಗೆಲ್ಲ ತಿಳಿಸಲಾಗಿದೆ,. ಸಂಬಂಧಪಟ್ಟ ಅಧಿಕಾರಿಗಳಲ್ಲದೇ, ಶಿಷ್ಟಾಚಾರ ಪಾಲಿಸುವುದರಲ್ಲಿ ವಿಫಲರಾದ ಹಿರಿಯ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದೆಂಬ ಸ್ಪಷ್ಟ ಸೂಚನೆಗಳನ್ನು ಸದರಿ ಸುತ್ತೋಲೆಯಲ್ಲಿ ನೀಡಲಾಗಿರುತ್ತದೆ.</td>
</tr>
</table>

**(ಸಿಆಸುಇ 12 ಹೆಚ್‌ಪಿಎ 2024)**

**(ಸಿದ್ದರಾಮಯ್ಯ)**

ಮುಖ್ಯ ಮಂತ್ರಿ